**ಪತ್ರಿಕಾ ಪ್ರಕಟಣೆ**

ವಿಜಯಪುರ
ದಿನಾಂಕ: 04.09.2021.

**1] ಚಡಚಣ ಪೊಲೀಸ ಠಾಣೆ ಗುನ್ನೆ ನಂ: 87/2021 ಕಲಂ: 279, 304(ಎ) ಐಪಿಸಿ**

ದಿನಾಂಕ: 03.09.2021 ರಂದು ಮುಂಜಾನೆ: 08.15 ಗಂಟೆಯ ಸುಮಾರಿಗೆ ಇದರಲ್ಲಿಯ ಆರೋಪಿತನಾದ ಸುಖದೇವ ನೀಜಪ್ಪ ಗಡ್ಡೇನ್ನವರ, ಬ್ಯಾಡ್ಜ್ ನಂ: 8045, ಇಂಡಿ ಡಿಪೋ ಸಾ॥ ಅಂಜುಟಗಿ ಕೆ.ಎಸ್.ಆರ್.ಟಿ.ಸಿ.ಬಸ್ಸ ನಂ: ಕೆ.ಎ:28 ಎಫ್:1895 ನೇದ್ದರ ಚಾಲಕ ಈತನು ತಾನು ನಡೆಸುತ್ತಿದ್ದ ಬಸ್ಸನ್ನು ಚಡಚಣ ಬಸ್ಸಸ್ಟ್ಯಾಂಡ ಕಡೆಯಿಂದಾ ಇಂಡಿ ಕಡೆಗೆ ಅತಿ ಜೋರಾಗಿ ವ, ನಿರ್ಲಕ್ಷತನದಿಂದಾ ಮಾನವೀಯ ಜೀವಕ್ಕೆ ಅಪಾಯಕರ ವಾಗುವ ರೀತಿಯಲ್ಲಿ ನಡೆಸಿಕೊಂಡು ರಸ್ತೆಯ ಬಲಬದಿಗೆ ಹೋಗಿ ಬಸ್ಸಿನ ಹಿಂಬಾಗ ತನ್ನ ತಂದೆಯ ಮೋಟರ್ ಸೈಕಲ್‌ಕ್ಕೆ ಟಚ್ ಮಾಡಿದ್ದರಿಂದಾ ಗುರುಬಸಪ್ಪ ತಂ: ಸಂಗಪ್ಪ ಅಲದಿ ವಯಾ॥ 55 ವರ್ಷ ಈತನು ಮೊಟರ್ ಸೈಕಲ್ ಸಮೇತ ರಸ್ತೆಯ ಮೇಲೆ ಬಿದ್ದಿರುತ್ತಾರೆ, ಇದರಿಂದಾ ತಲೆಗೆ ಬಲವಾದ ಗಾಯಪೆಟ್ಟುಗಳು ಆಗಿ ಕಿವಿಯಿಮದಾ ರಕ್ತಸ್ರಾವವಾಗಿದ್ದು, ಅಲ್ಲದೆ ಬಲಮುಂಡಿಗೆ, ಬಲಗಾಲಿಗೆ ತೆಗೆಚಿದ ಗಾಯಗಳು ಹಾಗು ಬಲಗೈಯ ಎಲುವು ಮುರಿದಿದ್ದು, ಮುಂದೆ ಉಪಚಾರಕ್ಕಾಗಿ ಚಡಚಣದ ಸರ್ಕಾರಿ ದವಾಖಾನೆಗೆ ಕರೆದುಕೊಂಡು ಹೋದಾಗ ಉಪಚಾರ ಫಲಕಾರಿ ಆಗದೆ ಮೃತಾಗಿರುತ್ತಾರೆ ಅಂತಾ ಫಿರ್ಯಾದದಲ್ಲಿ ನಮುದು ಇರುತ್ತದೆ. ಈ ಬಗ್ಗೆ ಮಹಾಂತೇಶ ಗುರುಬಸಪ್ಪ ಅಲದಿ ಸಾ॥ ಚಡಚಣ [ವಾರ್ಡ ನಂ: 2, ದಾವಲಮಲೀಕ ದರ್ಗಾದ ಹತ್ತಿರ ಮನೆ] ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 03.09.2021 ರಂದು ಚಡಚಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**2] ಮಹಿಳಾ ಪೊಲೀಸ ಠಾಣೆ ಗುನ್ನಾ. ನಂ: 101/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 30.09.2021 ರಂದು 17.45 ಗಂಟೆ ಸುಮಾರಿಗೆ ಇದರಲ್ಲಿಯ ಕಾಣೆಯಾದ ಶ್ವೇತಾ ತಂ॥ ಸುಭಾಶ್ಚಂದ್ರ ಕಾಳಗಿ, ವಯಾ: 19 ವರ್ಷ, ಸಾ॥ ವಿಜಯಪುರ, ಸಂಭವ ನಗರ ಇವಳು ಹಾಲು ತಗೆದುಕೊಂಡು ಬರುತ್ತೇನೆ ಅಂತಾ ಹೇಳಿ ಮನೆಯಿಂದ ಹೋಗಿದ್ದು, ಮರಳಿ ಮನೆಗೆ ಬಾರದೇ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ. ಈ ಬಗ್ಗೆ ಜಯಶ್ರೀ ಸುಭಾಶ್ಚಂದ್ರ ಕಾಳಗಿ ಸಾ॥ ವಿಜಯಪುರ, ಸಂಭವ ನಗರ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 03.09.2021 ರಂದು ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.

**3] ಇಂಡಿ ಗ್ರಾಮೀಣ ಪೊಲೀಸ ಠಾಣೆ ಗುನ್ನಾ. ನಂ: 168/2021 ಕಲಂ: ಮಹಿಳೆ ಕಾಣೆ.**

ದಿನಾಂಕ: 30.08.2021 ರಂದು ಸಾಯಂಕಾಲ 07.30 ಗಂಟೆಗೆ ಇದರಲ್ಲಿ ಕಾಣೆಯಾದ ಗುಲಶನಬಿ ಗಂ: ಮಹಿಬೂಬಸುಬಾನಿ ಮುಲ್ಲಾ ವಯಾ: 24 ವರ್ಷ ಸಾ: ಹಲಸಂಗಿ ಹಾ:ವ: ಅಹಿರಸಂಗ ಇವಳು ಅಹಿರಸಂಗ ಗ್ರಾಮದ ಹದ್ದಿಯಲ್ಲಿರುವ ನಮ್ಮ ಜಮೀನದಲ್ಲಿರುವ ಮನೆಯಲ್ಲಿಂದ ಸಂಡಾಸಕ್ಕೆ ಹೋಗಿ ಬರುತ್ತೇನೆ ಅಂತಾ ಹೇಳಿ ಹೋದವಳು ಮರಳಿ ಮನೆಗೆ ಬಾರದೆ ಎಲ್ಲಿಗೋ ಹೋಗಿ ಕಾಣೆಯಾಗಿದ್ದು ಇರುತ್ತದೆ. ಈ ಬಗ್ಗೆ ಸಯ್ಯದಸಾಬ ಕಾಶೀಮಸಾಬ ಹುಲಜಂತಿ ಸಾ: ಅಹಿರಸಂಗ ರವರು ಫಿರ್ಯಾದಿ ಕೊಟ್ಟ ಮೇರೆಗೆ ದಿನಾಂಕ: 03.09,2021 ರಂದು ಇಂಡಿ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ.